# ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಕಾರವಾರ

## ಸಿ.ಸಿ. ನಂ. 506/22

ಡಿ.ಡಬ್ಲ್ಯು 1

| | | |
|---|---|---|
| ಆರೋಪಿಯ ಹೆಸರು | – | ರಾಘು ನಾಯ್ಕ |
| ತಂದೆಯ ಹೆಸರು | – | ವಾಸುದೇವ ನಾಯ್ಕ |
| ವಯಸ್ಸು | – | 40 ವರ್ಷ |
| ಉದ್ಯೋಗ | – | ಓಂ ಡ್ರೈವಿಂಗ್ ಶಾಲೆ |
| ವಾಸ್ತವ್ಯ | – | ನಂದನಗದ್ದಾ, ಕಾರವಾರ ತಾಲೂಕ |

(ಇಂದು ದಿನಾಂಕಃ 04-11-2024 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**ಮುಖ್ಯ ವಿಚಾರಣೆಃ 1 ನೇ ಆರೋಪಿ ಪರ ಶ್ರೀ ಎಚ್.ಎಸ್.ಎಸ್. ವಕೀಲರಿಂದ**

ನಾನು ಸುಮಾರು 19 ವರ್ಷಗಳಿಂದ ವಿದ್ಯಾರ್ಥಿಗಳ ಪರವಾಗಿ ಹಾಗೂ ಜನ ಸಾಮಾನ್ಯರ ಪರವಾಗಿ ಹೋರಾಟ ಮಾಡುತ್ತಾ ಬಂದಿರುತ್ತೇನೆ. ಎಲ್ಲಿಯಾದರೂ ಅಪಘಾತವಾದರೆ ಗಾಯಾಳುವನ್ನು ಸಿವಿಲ್ ಆಸ್ಪತ್ರೆಗೆ ದಾಖಲಿಸುತ್ತೇನೆ. ನಾನು ಒಮ್ಮೆ ಸರಕಾರಿ ಆಸ್ಪತ್ರೆಗೆ ಹೋದಾಗ ಕರೋನಾ ರೋಗಿಗೆ ಬಿಡುಗಡೆ ಮಾಡಲು ಹೋಗಿದ್ದೆ. ಅವರಿಗೆ ಇಲ್ಲಿಂದ ಪೂನಾ ಕಳುಹಿಸಲು ಇತ್ತು. ಅವರು ನನಗೆ ಫೋನ್ ಪೇ ಮೂಲಕ ಹಣ ಕೊಡುವುದಾಗಿ ತಿಳಿಸಿದ್ದರು. ಆ ಸಮಯದಲ್ಲಿ ಅದೇ ಆಸ್ಪತ್ರೆಯಲ್ಲಿ 2 ಮತ್ತು 3 ನೇ ಆರೋಪಿತರು ಸೆಕ್ಯುರಿಟಿ ಗಾರ್ಡ ಆಗಿ ಕೆಲಸ ಮಾಡುತ್ತಿದ್ದರು. 2 ಮತ್ತು 3 ನೇ ಆರೋಪಿತರು ನನ್ನ ಬಳಿ ಬಂದು 2 ನೇ ಆರೋಪಿಯ ತಾಯಿಗೆ ಕ್ಯಾನ್ಸರ್ ಆಗಿದ್ದು ತಂದೆಗೆ ಪ್ಯಾರಾಲಿಸಿಸ್ ಆಗಿದೆ 3 ತಿಂಗಳಿನಿಂದ ಪೇಮೆಂಟ್ ಮಾಡಿಲ್ಲ, ಏನಾದರೂ ಮಾಡಿ ಎಂದು ಅಳುತ್ತಾ ಹೇಳಿದರು. ಆ ಕಾರಣ ನಾನು ಆ ಸಮಯದಲ್ಲಿ ಡೀನ್ ಆಗಿದ್ದ ಗಜಾನನ ನಾಯ್ಕರವರಿಗೆ ಫೋನ್ ಮಾಡಿ ಹೇಳಿದೆ. ಆ ಸಮಯದಲ್ಲಿ ಅವರೂ ಅವರಿಗೂ ಸಹ ಕರೋನಾ ಆಗಿದ್ದು ಆಸ್ಪತ್ರೆಗೆ ಬಂದಿಲ್ಲ ಎಂದು ಹೇಳಿದರು. ಸಿ.ಇ.ಓ. ಇವರಿಗೆ ಫೋನ್ ಮಾಡಲು ಹೇಳಿದ್ದು ಸಿ.ಇ.ಓ. ಅವರಿಗೆ ಫೋನ್ ಮಾಡಿದಾಗ ಅವರು ಅದು ನನಗೆ

ಸಂಬಂಧಪಟ್ಟಿದ್ದಲ್ಲ ಎಂದು ಹೇಳಿದರು. ಫಿರ್ಯಾದಿಯ ಬಳಿ ಅವರು ಹಣ ಪಾವತಿ ಮಾಡಲು ಕೇಳಿದ್ದು ಅವರು ಬೈದು ಕಳುಹಿಸಿರುತ್ತಾರೆ ಎಂದು 2 ಮತ್ತು 3 ನೇ ಆರೋಪಿತರು ಹೇಳಿರುತ್ತಾರೆ. ಅಷ್ಟರಲ್ಲಿ ಅಲ್ಲಿ ಒಬ್ಬ ದಿನಗೂಲಿ ನೌಕರ ಬಂದಿದ್ದು ನನ್ನ ಬಳಿ ಏನಾದರೂ ಸಹಾಯವನ್ನು 2 ಮತ್ತು 3 ನೇ ಆರೋಪಿತರಿಗೆ ಮಾಡಲು ಹೇಳಿದ್ದರು. ಆಗ ನಾನು ನಿಮಗೆ ಏನು ಅನ್ಯಾಯ ಆಗಿದೆ ಅದನ್ನು ಬಾಯಿಯಲ್ಲಿ ಹೇಳುತ್ತೀರಾ ಎಂದು ಕೇಳಿದೆ. ಅಷ್ಟರಲ್ಲಿ ದಿನಗೂಲಿ ನೌಕರರು ಅವರ ಮೊಬೈಲ್ ಆನ್ ಮಾಡಿ ವಾಯ್ಸು ಮತ್ತು ವಿಡಿಯೋ ರೆಕಾರ್ಡ ಮಾಡಿದರು. ಸರಕಾರದ ಗಮನಕ್ಕೆ ತರಲು ಅವರಿಗೆ ಏನು ಅನ್ಯಾಯ ಆಗಿದೆ ಎಂದು ಹೇಳಲು ಹೇಳಿದ್ದೆ. ಅವರು ನನಗೆ ಹೇಳಿದ ವಿಷಯವನ್ನೇ ಹೇಳಿರುತ್ತಾರೆ. ಫಿರ್ಯಾದಿಯವರು ನಮಗೆ ದಾದಾಗಿರಿ ಮಾಡುತ್ತಾರೆ ಎಂದು ಹೇಳಿದ್ದರು. ಫಿರ್ಯಾದಿಯವರು ಧಮಕಿ ಕೊಡುತ್ತಾರೆ ಹಾಗೂ ಕೆಲಸದಿಂದ ತೆಗೆಯುತ್ತೇನೆ ಎಂದು ಹೇಳಿರುತ್ತಾರೆ ಎಂದು ಹೇಳಿರುತ್ತಾರೆ. ಅದಕ್ಕೆ ನಾನು ಮಹಿಳಾ ಪೊಲೀಸ್ ಠಾಣೆಗೆ ಹೋಗಿ ದೂರು ಕೊಡಲು ಹೇಳಿದ್ದೆ. 2 ಮತ್ತು 3 ನೇ ಆರೋಪಿತರು ಇದರ ಮೊದಲು ದೂರು ಕೊಟ್ಟಿದ್ದು ಏನೂ ಪ್ರಯೋಜನ ಆಗಲಿಲ್ಲ ಎಂದು ಹೇಳಿದರು. ರೆಕಾರ್ಡ ಮಾಡಿದ ವಿಡಿಯೋವನ್ನು ಅವರು ನನಗೆ ಶೇರ್ ಮಾಡಿದ್ದು ನಾನು ಅದನ್ನು ನನ್ನ ಯೂಟೂಬ್ ಚಾನೆಲ್‌ನಲ್ಲಿ ಹಾಕಿದ್ದೆ. ನಂತರ ನಾನು 2 ಮತ್ತು 3 ನೇ ಆರೋಪಿತರನ್ನು ವಿಚಾರಿಸಿದ್ದು ಅವರು ಮಹಿಳಾ ಪೊಲೀಸ್ ಠಾಣೆಯಲ್ಲಿ ದೂರು ಕೊಟ್ಟಿದ್ದು ಅದನ್ನು ಸ್ವೀಕರಿಸಿದ್ದಾರೆ ಎಂದು ಹೇಳಿದರು. ನಂತರ ಗೀತಾ ಬಾನಾವಳಿ ಎಂಬ ಬಡ ಮಹಿಳೆಗೆ ಒಂದು ಹೆಣ್ಣು ಮಗು ಆಗಿದ್ದು ಅವರಿಗೆ ಅನಸ್ತೇಶಿಯಾ ಇಂಜೆಕ್ಷನ್ ಕೊಡಬೇಕಾದರೆ ಆಪರೇಷನ್ ವಾರ್ಡನಲ್ಲಿ ಹರ್ಷಿತಾ ಜಾಧವ್ ಎಂಬ ನರ್ಸ ಇದ್ದು ಅವರು ಲಿಖಿತವಾಗಿ ಎಸ್.ಪಿ.ಯವರಿಗೆ, ಜಿಲ್ಲಾಧಿಕಾರಿಯವರಿಗೆ ಹಾಗೂ ಸಿ.ಇ.ಓ. ರವರಿಗೆ ದೂರು ಕೊಟ್ಟಿದ್ದರು. ಹರ್ಷಿತಾ ಜಾಧವ್ ತಾತ್ಕಾಲಿಕ ನರ್ಸ ಆಗಿದ್ದು ಅವರು ತಮ್ಮ ಲಿಖಿತ ಪತ್ರದಲ್ಲಿ ಸಿ.ಇ.ಓ. ಮತ್ತು ಡಿ.ಸಿ.ಯವರಿಗೆ ಒಂದು ಮನವಿ ಕೊಟ್ಟಿದ್ದು, ಅನಸ್ತೇಶಿಯಾವನ್ನು ನೀನೆ ಕೊಟ್ಟಿದ್ದೆ ಎಂದು ಹೇಳು ಎಂದು

ಧಮಕಿ ಹಾಕುತ್ತಿದ್ದಾರೆ ಇದರಿಂದ ನನಗೆ ರಕ್ಷಣೆ ಕೊಡಿ ನಾನು ಆ ದಿವಸ ಅನಸ್ತೇಶಿಯಾವನ್ನು ಕೊಟ್ಟಿಲ್ಲ ಎಂದು ಹೇಳಿರುತ್ತಾರೆ. ಈ ಬಗ್ಗೆ ಹೋರಾಟ ಮಾಡಿ ಗೀತಾ ಬಾನಾವಳಿ ಇವರಿಗೆ ನ್ಯಾಯ ಸಿಗಬೇಕೆಂದು ಕೇಳಿರುತ್ತೇವೆ. ಇದೇ ದ್ವೇಷ ಇಟ್ಟುಕೊಂಡು ನಾನೇ ಮುಂಚೂಣಿಯಲ್ಲಿ ಇದ್ದ ಕಾರಣ ಫಿರ್ಯಾದಿಯವರು ನನ್ನ ಮೇಲೆ ಸುಳ್ಳು ಕೇಸ ಹಾಕಿದ್ದು ಆ ದಿವಸ ನಾನು ಆಸ್ಪತ್ರೆಗೆ ಹೋಗಿದ್ದೇ ಇರುವುದಿಲ್ಲ. ಆದರೂ ನಾನು ಹೋಗಿದ್ದೇನೆ ಹಾಗೂ ಜೀವ ಬೆದರಿಕೆ ಕೊಟ್ಟಿದ್ದೇನೆ ಎಂದು ದೂರು ಕೊಟ್ಟಿದ್ದಾರೆ. ಆ ದೂರಿನ ಅನ್ವಯ ನನ್ನ ಮೇಲೆ ಪ್ರ.ವ. ವರದಿ ದಾಖಲಾಗಿರುತ್ತದೆ. ಪೊಲೀಸರು ತನಿಖೆಯ ನಂತರ 'B' ವರದಿ ಸಲ್ಲಿಸಿರುತ್ತಾರೆ. ನಾನು ಯಾವುದಾದರೂ ರೋಗಿಯನ್ನು ಆಸ್ಪತ್ರೆಗೆ ತೆಗೆದುಕೊಂಡು ಹೋದರೆ ನನ್ನ ಮೇಲೆ ಗಲಾಟೆ ಮಾಡಿದ್ದಾರೆ ಎಂದು ನನ್ನ ಮೇಲೆ ಸುಳ್ಳು ಕೇಸು ಹಾಕುತ್ತಾರೆ. ಆಸ್ಪತ್ರೆಯಲ್ಲಿ ಎಂ.ಆರ್.ಐ, scan ಇಲ್ಲ, ವೆಂಟಿಲೇಟರ್ ಆ್ಯಂಬುಲೆನ್ಸ್ ಇಲ್ಲ. ಈ ಬಗ್ಗೆ ಹೋರಾಟ ಮಾಡಿದಾಗ ಸುಳ್ಳು ದೂರು ಕೊಟ್ಟಿರುತ್ತಾರೆ. 50 ಕ್ಕೂ ಹೆಚ್ಚು RTI ಅರ್ಜಿ ಸಲ್ಲಿಸಿದ್ದು ಒಂದಕ್ಕೂ ಸಹ ಉತ್ತರ ಕೊಟ್ಟಿರುವುದಿಲ್ಲ. ಹೊರ ಗುತ್ತಿಗೆದಾರರು ಚಕ್‌ಗಳನ್ನು ಬರೆಯುತ್ತಿದ್ದು ಅದರ ಬಗ್ಗೆ ನಾನು ವಿಚಾರಿಸಿರುತ್ತೇನೆ. ನಾನು ಡಾಕ್ಟರ್ ಹಾಗೂ ಯೂನಿಯನ್ ಸೇರಿ ನಿಮ್ಮ ಮೇಲೆ ಕೇಸ ಹಾಕುತ್ತೇವೆ ಎಂದು ಹೇಳಿ ನನಗೆ ಧಮಕಿ ಕೊಟ್ಟಿರುತ್ತಾರೆ. ಪೊಲೀಸ್ ಇಲಾಖೆಗೆ ಫಿರ್ಯಾದಿಯವರು ಒಂದು ದೂರು ಕೊಟ್ಟಿದ್ದು ನಾನು ಲೈಸನ್ಸಗಳನ್ನು ಒಂದು ಹಳದಿ ಬಣ್ಣದ ಬ್ಯಾಗನಲ್ಲಿ ಹಾಕಿ RTO ಕಚೇರಿಗೆ ಹೋಗಿದ್ದು ಅದರ ಪೋಟೊ ತೆಗೆದು ಫಿರ್ಯಾದಿ ನೇತೃತ್ವದಲ್ಲಿ ಅದರಲ್ಲಿ ಗಾಂಜಾ ಸಾಗಾಟ ಆಗುತ್ತಿದೆ ಎಂದು ದೂರು ಕೊಟ್ಟಿರುತ್ತಾರೆ. ನಾನು ಕಾಲೇಜಿನಲ್ಲಿ ಇದ್ದಾಗ ಡ್ರಗ್ ಅವೆರನೆಸ್ ಕಾರ್ಯಕ್ರಮಗಳನ್ನು ಮಾಡಿರುತ್ತೇನೆ. ಅದಕ್ಕೆ ಅನೇಕ ಅಧಿಕಾರಿಗಳು ಬಂದಿರುತ್ತಾರೆ. ಡ್ರಗ್ ಕೇಸ್ ದಾಖಲಿಸಲು ಪೊಲೀಸರಿಗೆ ಫಿರ್ಯಾದಿ ದಬ್ಬಾಳಿಕೆ ಮಾಡುತ್ತಿದ್ದಾರೆ. ಆಸ್ಪತ್ರೆಯಲ್ಲಿ ಯಾರಾದರೂ ವೈದ್ಯರು ನನ್ನ ಜೊತೆ ಮಾತನಾಡಿದರೆ ಅವರಿಗೆ ಬೈಯುವುದು ಮಾಡುತ್ತಾರೆ. 'B' ವರದಿ ಹಾಕಿದ ನಂತರ ಖಾಸಗಿ

ದೂರು ದಾಖಲಿಸಿರುತ್ತಾರೆ. ಆಸ್ಪತ್ರೆಗೆ ಹೋದಾಗ ಆ್ಯಂಬುಲೆನ್ಸ್ ಚಾಲಕ ಅತೂಲ್ ಕಡೆಯಿಂದ ಆ್ಯಂಬುಲೆನ್ಸ ಒಡೆದು ಹಾಕಿ, ಪೈಪ್ ಕಿತ್ತು ಹಾಕಿದ್ದಾರೆ ಎಂದು ದೂರು ಕೊಡಿಸಿರುತ್ತಾರೆ. ಆದರೆ ಅತೂಲ್ ಇವರಿಗೆ ಕನ್ನಡ ಓದಲು ಬರೆಯಲು ಬರುವುದಿಲ್ಲ. ಬೇರೆ ಸೆಕ್ಯುರಿಟಿ ಗಾರ್ಡ ಇವರಿಂದ ಬರೆಸಿ ಸಹಿ ಹಾಕಿ ಠಾಣೆಗೆ ದೂರು ಕೊಟ್ಟಿದ್ದಾರೆ. ಠಾಣೆಗೆ ಪೊಲೀಸರು ಕರೆದು ನನ್ನ ವಿಚಾರಣೆ ಮಾಡಿದಾಗ ಇದರ ಬಗ್ಗೆ ಗೊತ್ತಾಯಿತು. ನಾನು ಆ್ಯಂಬುಲೆನ್ಸ ಕಡೆ ಹೋಗಲೇ ಇಲ್ಲ ಎಂದು ಪೊಲೀಸರಿಗೆ ಹೇಳಿರುತ್ತೇನೆ. RTI ಅಡಿಯಲ್ಲಿ ಪೊಲೀಸರು ದಾಖಲಾತಿಗಳನ್ನು ಕೊಟ್ಟಿರುತ್ತಾರೆ. 2 ಮತ್ತು 3 ನೇ ಆರೋಪಿತರು ಸಚಿವರಿಗೆ ಒಂದು ಪತ್ರ ಬರೆದಿದ್ದಾರೆ. ನನಗೆ ಸುಳ್ಳು ಕೇಸುಗಳಿಂದ ಮನಸ್ಸಿಗೆ ಬಹಳ ಬೇಜಾರಾಗಿರುತ್ತದೆ. ಸುಳ್ಳು ಕೇಸ್‌ಗಳಿಂದ ನ್ಯಾಯ ಕೊಡಿಸಬೇಕೆಂದು ಕೇಳಿಕೊಳ್ಳುತ್ತೇನೆ.

**(ಈ ಹಂತದಲ್ಲಿ 1 ನೇ ಆರೋಪಿ ಪರ ವಕೀಲರು ಮುಂದುವರಿದ ಮುಖ್ಯ ವಿಚಾರಣೆಗೆ ಸಮಯಾವಕಾಶ ಕೋರಿದ್ದು, ಮುಂದೂಡಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ.

ಮುಖ್ಯ ನ್ಯಾಯಿಕ ದಂ. ಕಾರವಾರ